# ಬಾಪೂಜಿನಗರ ವಾರ್ಡ್ ಸಂಖ್ಯೆ: 134 ರ ವಾರ್ಡ್ ಸಮಿತಿ ಸಭೆ ನಡವಳಿಗಳು

ಶ್ರೀ. ನಿಶಾಂತ್ ನೋಡಲ್ ಅಧಿಕಾರಿ ಯರವರ ಘನ ಅಧ್ಯಕ್ಷತೆಯಲ್ಲಿ ದಿ: 05.12.2020 ರಂದು ಮಧ್ಯಾಹ್ನ ಬಾಪೂಜಿನಗರ ವಾರ್ಡ್ ಸಂಖ್ಯೆ: 134 ರ ಸಮಿತಿ ಸಭೆಯನ್ನು ನಡೆಸಲಾಯಿತು. ಸಮಿತಿಗೆ ಕೆಳಕಂಡ ಸದಸ್ಯರು ಹಾಜರಿರುತ್ತಾರೆ.

## ಸಭೆಗೆ ಹಾಜರಿದ್ದ ಅಧಿಕಾರಿಗಳು

| ಕ್ರಸಂ | ಹೆಸರು | ಹುದ್ದೆ |
|---|---|---|
| 1. | ಶ್ರೀ. ನಿಶಾಂತ್ ನೋಡಲ್ ಅಧಿಕಾರಿ | ಅಧ್ಯಕ್ಷರು. |
| 2. | ಶ್ರೀ. ಬಿ.ಸಿ. ಶಿವಣ್ಣ ಸ.ಅ | ಕಾರ್ಯದರ್ಶಿ. |
| 3. | ಶ್ರೀ. ಶಿವಕುಮಾರ್ (ಕಂ.ಪ) | ಸದಸ್ಯರು. |
| 4. | ಶ್ರೀ. ಜಗದೀಶ್ (ಹಿ.ಆ.ಪ) | ಸದಸ್ಯರು. |
| 5. | ಶ್ರೀಮತಿ. ಸವಿತ (JHI) | ಸದಸ್ಯರು. |
| 6. | ಶ್ರೀ. ದೊಡ್ಡವೀರಪ್ಪ ಸ.ಅ (BWSSB) | ಸದಸ್ಯರು. |
| 7. | ಶ್ರೀ. ಅರುಣ್ ಕುಮಾರ್ ಸ.ಅ (ಬೆಸ್ಕಾಂ) | ಸದಸ್ಯರು. |
| 8. | ಶ್ರೀಮತಿ. ಡಾ. ಸವಿತ (ವೈದ್ಯಾಧಿಕಾರಿಗಳು) | ಸದಸ್ಯರು. |
| 9. | ಶ್ರೀ. ಡಾ. ಮಂಜುನಾಥ್ (ಕೋವಿಡ್) | ಸದಸ್ಯರು. |
| 10. | ಶ್ರೀ. ಕೆ.ಎಲ್. ಉಮೇಶ್ (ಕೆ.ಪ) | ಸದಸ್ಯರು. |

ವಾರ್ಡಿನ ಕಾರ್ಯದರ್ಶಿಗಳಾದ ಶ್ರೀ.ಬಿ.ಸಿ.ಶಿವಣ್ಣ ರವರು ಅಧ್ಯಕ್ಷರನ್ನೂ ಹಾಗೂ ಹಾಜರಿದ್ದ ಸದಸ್ಯರನ್ನು ಸ್ವಾಗತಿಸಿದರು.

**HEALTH**

ಶ್ರೀಮತಿ. ಡಾ. ಸವಿತ ರವರು ಆಸ್ಪತ್ರೆ ಕಟ್ಟಡವು ಸೋರುತ್ತಿರುವುದನ್ನು ಅತಿ ಶೀಘ್ರದಲ್ಲಿ ದುರಸ್ಥಿ ಮಾಡಿಸ ಕೊಡಬೇಕೆಂದು ಕೋರಿದರು. 14 ನೇ ಹಣಕಾಸಿನ ಅನುದಾನದಲ್ಲಿ ಮಾಡಿಸಿಕೊಡುವುದಾಗಿ ಕಾರ್ಯದರ್ಶಿಗಳು ತಿಳಿಸಿದರು. ನಾಯಿ ಕಡಿಯುತ್ತಿರುವ ರೋಗಿಗಳು ಹೆಚ್ಚು ಬರುತ್ತಿದ್ದು ನಾಯಿ ಹಿಡಿಯಲು ಕ್ರಮ ಕೈಗೊಳ್ಳಬೇಕೆಂದು ಡಾ. ಸವಿತ ರವರು ಕೋರಲಾಗಿ ದಕ್ಷಿಣ ಕಂಟ್ರೋಲ್ ರೂಮ್‌ಗೆ ದೂರವಾಣಿ ಕರೆ ಮಾಡಿ ಪಶು ಪಾಲನ ವಿಭಾಗಕ್ಕೆ ದೂರು ನೀಡಲಾಯಿತು.

ಕೋವಿಡ್-19 Testing ಬಗ್ಗೆ ಚರ್ಚಿಸಲಾಯಿತು. ಶ್ರೀ.ಜಗದೀಶ್ (ಹಿ.ಆ.ಪ) ರವರು ಕೋವಿಡ್-19 Testing ಬಗ್ಗೆ ವಿವರಿಸಿದರು. ಇದುವರೆಗೂ 449 + Case ಗಳು ಪತ್ತೆಯಾಗಿದೆ. ಇದುವರೆಗೂ 398 ಜನರು Discharge ಆಗಿದ್ದಾರೆ, ಮನೆಯಲ್ಲಿ 18 ಜನರು ಚಿಕಿತ್ಸೆ ಪಡೆಯುತ್ತಿದ್ದಾರೆ. ಈಗ 5 ಜನರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇದುವರೆಗೂ 24 ಜನರು ಮರಣ ಹೊಂದಿರುತ್ತಾರೆ ಪ್ರತಿದಿನ ವಾರ್ಡ್‌ನ ಯಾವುದಾದರೂ ರಸ್ತೆಯಲ್ಲಿ ಒಂದು ಕಡೆ, ಕೋವಿಡ್-19 Testing ನಡೆಸುತ್ತಿರುವುದಾಗಿ ವಿವರಿಸಿದರು.

**BWSSB** ನೆಹರು ರಸ್ತೆಯ ಪಾಟೀಲ್ ಹೋಟೆಲ್ ಬಳಿ Manhole ಗೆ ವಾರ್ಡ್ ಸಂಖ್ಯೆ: 136 ರ Manhole Chamber ನಿಂದ ನೀರು ಉಕ್ಕಿ ಬರುತ್ತಿದ್ದು ಅದು ರಸ್ತೆಯ ಮೇಲೆಯೆ ಹರಿದು ಬಂದು ಸಾರ್ವಜನಿಕರು ಓಡಾಡಲು ತೊಂದರೆಯಾಗುತ್ತಿರುವುದನ್ನು ಚರ್ಚಿಸಲಾಗಿ ಭೂಗತ ಕೊಳವೆಯ ವ್ಯಾಸವನ್ನು ಹೆಚ್ಚಿಸಿ ಕೊಳವೆಯನ್ನು ಅಳವಡಿಸಿ ಸರಿಪಡಿಸಿಕೊಡುವುದಾಗಿ ಶ್ರೀ. ದೊಡ್ಡವೀರಪ್ಪ ಸ.ಅ (BWSSB) ಸಭೆಗೆ ತಿಳಿಸಿದರು.

**REVENUE** ಶ್ರೀ.ಶಿವಕುಮಾರ್ RI ರವರು Tax Collection ಬಗ್ಗೆ ವಿವರಿಸಿದರು ಹಿಂದಿನ ಪಾಕ್ಷಿಕದಲ್ಲಿ ಅಂದಾಜು ರೂ: 5.67 ಲಕ್ಷಗಳು ತೆರಿಗೆ ಸಂಗ್ರಹಿಸಿರುವುದಾಗಿ ತಿಳಿಸಿದರು. ಇನ್ನು ಹೆಚ್ಚಿನ ತೆರಿಗೆ ಸಂಗ್ರಹಿಸುವಂತೆ ಅದ್ಯಕ್ಷರು ಸೂಚಿಸಿದರು.

**SWM** ಶ್ರೀಮತಿ.ಸವಿತ (ಕಿ.ಆ.ಪ) ರವರು ಘನತ್ಯಾಜ್ಯ ನಿರ್ವಹಣೆಯ ಬಗ್ಗೆ ವಿವರಿಸಿದರು.

ವಾರ್ಡ್‌ನಲ್ಲಿ ಸಮರ್ಪಕವಾಗಿ ಘನತ್ಯಾಜ್ಯ ವಿಲೇವಾರಿಯಾಗುತ್ತಿದ್ದು. ಉಳಿದ Silt & Debris ಗಳನ್ನು Tractor ಮೂಲಕ ತೆರವುಗೊಳಿಸಿ ಕೊಡಬೇಕೆಂದು ಕಾರ್ಯದರ್ಶಿರವರನ್ನು ಕೋರಿದರು.

ಮೇಲೆ ಸೂಚಿಸಿರುವ ಎಲ್ಲಾ ಆದೇಶಗಳನ್ನು ಪಾಲಿಸಿ ವರದಿಯನ್ನು ಸಲ್ಲಿಸುವುದಾಗಿ ಕಾರ್ಯದರ್ಶಿ ರವರು ತಿಳಿಸಿದರು.

ವಂದನಾರ್ಪಣೆಯನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಬೆಂಗಳೂರು.
ದಿ: 05.12.2020

5/12/2020

ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರು
ವಾರ್ಡ್ ಸಂ: 134.